# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/401/12-13 ದಿನಾಂಕ :25-10-2016

ಉಪಸ್ಥಿತರು: ಶ್ರೀ ಲೋಕೇಶ್ ಪಿ.ಎನ್ (ಕ.ಆ.ಸೇ)

ಸಹಾಯಕ ಆಯುಕ್ತರು, ಬಳ್ಳಾರಿ.

| ವಾದಿಗಳು | ಪ್ರತಿವಾದಿಗಳು |
|---|---|
| 1.ಶ್ರೀಮತಿ ಮಹಂಕಾಳಮ್ಮ ಗಂಡ ದಿ ಬಲಕುಂದಪ್ಪ, ಬಲಕುಂದಿ ಗ್ರಾಮ, ಸಿರುಗುಪ್ಪ ತಾಲ್ಲೂಕು<br><br>(ಶ್ರೀ ಪಿ. ಮಲ್ಲಯ್ಯ, ವಕೀಲರು, ಬಳ್ಳಾರಿ) | 1. ತಹಶೀಲ್ದಾರರು, ಸಿರುಗುಪ್ಪ<br>2. ಕಂದಾಯ ನಿರೀಕ್ಷಕರು, ಕರೂರು<br>3. ಗ್ರಾಮಲೆಕ್ಕಾಧಿಕಾರಿಗಳು, ಬಲಕುಂದಿ<br>4. ಶ್ರೀ ಕಾಳಿಂಗಪ್ಪ ತಂದೆ ದಿ ಗಾಣಿಗರ ವೀರಭದ್ರಪ್ಪ, 1ನೇ ವಾರ್ಡ್, ಗೌಡರ ಓಣಿ, ಬಲಕುಂದಿ ಗ್ರಾಮ, ಸಿರುಗುಪ್ಪ ತಾಲ್ಲೂಕು<br>5. ಶ್ರೀ ಪೀರ್ ಮಹಮ್ಮದ್ ತಂದೆ ಸಣಾಪುರ ಸಣ್ಣ ಹುಸೇನ್ ಸಾಬ್, ವಾರ್ಡ್ ನಂ 1, ತೆಕ್ಕಲಕೋಟೆ, ಸಿರುಗುಪ್ಪ ತಾಲ್ಲೂಕು |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಸಿರುಗುಪ್ಪ | ಬಲಕುಂದಿ | 132/ಎ, 132/ಬಿ, 132/ಸಿ | 0.64, 1.05, 3.27 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು, ಕರೂರು ಇವರ ಎಂ ಆರ್ ನಂ 6/01-025 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಠಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 20.12.2013, 18.02.2014,02.12.2014, 28.07.2015, 25.08.2016, 25.10.2016ಗಳಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಅವರ ವಕೀಲರ ಮುಖಾಂತರ ದಿನಾಂಕ: 28.07.2015 ರಂದು ಈ ನ್ಯಾಯಾಲಯಕ್ಕೆ ಹಾಜರಾಗಿ, ಸಿರುಗುಪ್ಪ ತಾಲ್ಲೂಕಿನ ಬಲಕುಂದಿ ಗ್ರಾಮದ ಸ.ನಂ 132/ಎ, 132/ಬಿ, 132/ಸಿ ವಿಸ್ತೀರ್ಣ: 0.64, 1.05, 3.27 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಕರೂರು ಇವರ ಎಂ ಆರ್ ನಂ 6/01-025 ರ ರನ್ವಯ ಪ್ರತಿವಾದಿ 4 ರವರ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಿರುವುದರ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಆದರೆ ಪ್ರಸ್ತಾಪಿತ ಜಮೀನುಗಳ ವಿವಾದಕ್ಕೆ ಸಂಬಂಧಿಸಿದಂತೆ ವಾದಿ ಮತ್ತು ಪ್ರತಿವಾದಿಗಳು ಗ್ರಾಮದ ಹಿರಿಯರು ಮತ್ತು ಹಿತೈಶಿಗಳ ಸಮ್ಮುಖದಲ್ಲಿ ಇತ್ಯರ್ಥ ಪಡಿಸಿಕೊಂಡಿರುವುದಾಗಿ ತಿಳಿಸಿ, ಮೇಲ್ಮನವಿಯನ್ನು ಹಿಂಪಡೆಯಲು ಕೋರಿ ಈ ನ್ಯಾಯಾಲಯಕ್ಕೆ ಮೆಮೊ (NOT PRESS MEMO) ನ್ನು ಸಲ್ಲಿಸಿರುತ್ತಾರೆ.

ಕಾರಣ ಸದರಿ ಪ್ರಕರಣವನ್ನು ಮುಂದುವರೆಸಲು ಆಸಕ್ತಿ ಇಲ್ಲವೆಂದು ತಿಳಿಸಿ ವಾದಿಪರ ವಕೀಲರು ಮೆಮೋ (NOT PRESS MEMO) ಸಲ್ಲಿಸಿರುವ ಮೇರೆಗೆ ಹಾಗೂ ಮುಕ್ತಾಯಗೊಳಿಸಲು ಕೋರಿ ಸಹಿ ಮಾಡಿ ಒಪ್ಪಿಗೆಯನ್ನು ಸೂಚಿಸಿರುವುದರಿಂದ ಈ ಪ್ರಕರಣವನ್ನು ಇದೇ ಹಂತದಲ್ಲಿ ಮುಕ್ತಾಯಗೊಳಿಸಲು ಈ ಕೆಳಕಂಡಂತೆ ಆದೇಶದ.

:: ಆದೇಶ ::

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ಸಿರುಗುಪ್ಪ ತಾಲ್ಲೂಕಿನ ಬಲಕುಂದಿ ಗ್ರಾಮದ ಸ.ನಂ 132/ಎ, 132/ಬಿ, 132/ಸಿ ವಿಸ್ತೀರ್ಣ: 0.64, 1.05, 3.27 ಎಕರೆ ಜಮೀನಿಗೆ ಸಂಬಂಧಿಸಿದಂತೆ ವಾದಿಗಳು ಸಲ್ಲಿಸಿರುವ ಮೆಮೋ (NOT PRESS MEMO) ರ ಮೇಲ್ಮನವಿಯನ್ನು ಇದೇ ಹಂತದಲ್ಲಿ ಮುಕ್ತಾಯಗೊಳಿಸಿ ಪ್ರಕರಣವನ್ನು ವಜಾ ಮಾಡಿ ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ, ಬರೆಯಿಸಿ ತಪ್ಪುಗಳನ್ನು ತಿದ್ದಿ **ದಿನಾಂಕ: 25.10.2016** ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ

ಸಹಾಯಕ ಆಯುಕ್ತರು,

ಬಳ್ಳಾರಿ